ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಪನೂರ ಕೈಗಾರಿಕಾ ಪ್ರದೇಶದ 3ನೇ ಹಂತದಲ್ಲಿ 53–48 ಎಕರೆ ಜಮೀನನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಒಟ್ಟು 67 ಕೈಗಾರಿಕಾ ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ.

ಆ) ಒಟ್ಟು 17 ನಿವೇಶನಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಲಾಗಿದೆ.

ಇ) ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಪೂರ್ಣಗೊಂಡನಂತರ ನಿವೇಶನಗಳನ್ನು ಹಂಚಲಾಗುವುದು.

ಜಲ್ಲಿ ಕ್ರಷರ್ ಘಟಕಗಳು

1265(1585); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಲ್ಲಿ ಕ್ರಷರ್ ಘಟಕಗಳು ಎಷ್ಟು; ಹೊಸದಾಗಿ ಜಲ್ಲಿ ಕ್ರಷರ್ ಘಟಕ ಪ್ರಾರಂಭಿಸಲು ಇರುವ ಮಾನದಂಡಗಳೇನು?

ಆ) ಬೀದರ್ ಜಿಲ್ಲೆಯಲ್ಲಿ ಎಷ್ಟು ಜಲ್ಲಿ ಕ್ರಷರ್ ಘಟಕಗಳು ಕ್ರಮಬದ್ಧವಾಗಿ ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿವೆ;

ಇ) ಜಲ್ಲಿ ಕ್ರಷರ್ ಘಟಕಗಳನ್ನು ಅಕ್ರಮವಾಗಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ಘಟಕಗಳನ್ನು ಸಕ್ರಮಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿ 899 ಜಲ್ಲಿ ಕ್ರಷರ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಹೊಸದಾಗಿ ಜಲ್ಲಿ ಕ್ರಷರ್ ಘಟಕ ಪ್ರಾರಂಭಿಸಲು ಹಾಲಿ ಕಲ್ಲುಪುಡಿ ಘಟಕಗಳ ನಿಯಂತ್ರಣ (ತಿದ್ದುಪಡಿ)ಅಧಿನಿಯಮ 2011ಕ್ಕೆ ದಿನಾಂಕ:26–12–2013ರಲ್ಲಿ ತಿದ್ದುಪಡಿ ತರಲಾಗಿರುತ್ತದೆ. ತಿದ್ದುಪಡಿಗಳಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

1. ಸುರಕ್ಷಿತ ವಲಯ ಘೋಷಣೆಯ ಮತ್ತು ಲೈಸೆನ್ಸ್ ನೀಡುವ ಕ್ರಮಗಳನ್ನು ಸರಳೀಕರಣ ಮಾಡಿದೆ.

2. ರಾಷ್ಟ್ರೀಯ ಹೆದ್ದಾರಿಗಳು ಅಥವಾ ರಾಜ್ಯ ಹೆದ್ದಾರಿಗಳ ಗಡಿಯಿಂದ 200ಮೀಟರ್, ಪ್ರಧಾನ ಜಿಲ್ಲಾ ರಸ್ತೆಗಳ ಅಥವಾ ಇತರೆ ರಸ್ತೆ ಗಳಗಡಿಯಿಂದ 100ಮೀಟರ್, ಕಂದಾಯ ಗ್ರಾಮಗಳು/ದೇವಾಲಯಗಳು/ಶಾಲೆಗಳಿಂದ 500ಮೀಟರ್‌ಗಳೊಳಗೆ ಸುರಕ್ಷಿತ ಅಂತರವನ್ನು ಕಾಯ್ದಿರಿಸಿ ಕಲ್ಲುಪುಡಿ ಘಟಕಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.

3. ಜಲ್ಲಿ ಕ್ರಷರ್ ಘಟಕ ಸ್ಥಾಪನೆಗಾಗಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಮುಂದೆ ನಿಗದಿಪಡಿಸಿದ ಶುಲ್ಕಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

4. ಎಲ್ಲಾ ಅರ್ಜಿಗಳನ್ನು 3ತಿಂಗಳೊಳಗೆ ವಿಲೇ ಮಾಡುವುದು ಮತ್ತು ಆದ್ಯತೆ ಮೇರೆಗೆ ಚಾಲ್ತಿಯಲ್ಲಿರುವ ಘಟಕಗಳ ಅರ್ಜಿಗಳನ್ನು ವಿಲೇವಾರಿಮಾಡುವುದು. ಅರ್ಜಿಗಳನ್ನು ಸಮಿತಿ ಸಭೆಯಲ್ಲಿ ಚರ್ಚೆಸಿ ಸುರಕ್ಷಿತ ವಲಯಗಳೆಂದು ಘೋಷಿಸಲು ಅರ್ಹತೆಯಿರುವ ಪ್ರದೇಶಗಳಿಗೆ ಅನುಮೋದನೆ ಪಡೆದು ನಡವಳಿಯಲ್ಲಿ ದಾಖಲಿಸಿ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸುವುದು.

5. ಅಧಿಸೂಚನೆಗೊಂಡ ಸುರಕ್ಷಿತ ವಲಯಗಳ ಅರ್ಜಿದಾರರಿಗೆ ಫಾರಂ–ಬಿ1 ರಲ್ಲಿ ಪಾಲನಾ ಪ್ರಮಾಣ ಪತ್ರ ನೀಡುವುದು ಹಾಗೂ ಸದರಿ ಮಾಹಿತಿಯನ್ನು ರಿಜಿಸ್ಟರ್‌ನಲ್ಲಿ ನಮೂದಿಸುವುದು.

6. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕನ್ಸೆಂಟ್ ಫಾರ್ ಆಪರೇಶನ್ (CFO) ಪಡೆದು ಸಮಿತಿಗೆ ಹಾಜರು ಪಡಿಸುವ ಕಲ್ಲುಪುಡಿ ಘಟಕಗಳಿಗೆ ಫಾರಂ–ಸಿ ಮೂಲಕ 5ವರ್ಷಗಳಿಗೆ ಲೈಸೆನ್ಸ್‌ನ್ನು ನೀಡುವುದು.

7. ಚಾಲ್ತಿಯಲ್ಲಿರುವ ಕಲ್ಲುಪುಡಿ ಘಟಕಗಳ ಮಾಲೀಕರು ಘೋಷಣೆಯೊಂದಿಗೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಸುರಕ್ಷಿತ ವಲಯ ಪಾಲನಾ ಪ್ರಮಾಣ ಪತ್ರವನ್ನು ನೀಡುವವರೆಗೆ ಅಥವಾ ನಿರಾಕರಿಸುವವರೆಗೆ ಅಥವಾ ದಿನಾಂಕ: 26–12–2013ರಿಂದ 3ತಿಂಗಳುಗಳವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಮೇಲಿನ ಕ್ರಮಗಳಿಂದ ಜಲ್ಲಿ ಪೂರೈಕೆಯಲ್ಲಿ ಸುಧಾರಣೆಯಾಗಲಿದೆ.

ಆ) ಬೀದರ್ ಜಿಲ್ಲೆಯಲ್ಲಿ 18 ಜಲ್ಲಿ ಕ್ರಷರ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಇ) ಈ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಮಹಾನಗರ ಪಾಲಿಕೆಗಳಿಗೆ ಬಿಡುಗಡೆಯಾದ ಅನುದಾನ

1266(1586); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಕಳೆದ 3 ವರ್ಷಗಳಿಂದ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಿಂದ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನವೆಷ್ಟು, ಖರ್ಚಾದ ಹಣವೆಷ್ಟು; (ವಿವರ ನೀಡುವುದು);

ಆ) ಬಿಡುಗಡೆಯಾದ ಅನುದಾನ ಸಮರ್ಪಕವಾಗಿ ಬಳಕೆಯಾಗದಿರುವುದು ಹಾಗೂ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;